## ಯಾವ ಕಡೆಯವರು?

ಸಮಾರಂಭ ಒಂದರಲ್ಲಿ ಭೋಜನಾಲಯದ ಮೇಲ್ವಿಚಾರಕರು ಅಂದಿನ ಭೋಜನದ ವ್ಯವಸ್ಥೆಯನ್ನು ವೀಕ್ಷಿಸುತ್ತಿದ್ದರು. ಪಂಕ್ತಿಯಲ್ಲಿ ಕುಳಿತ ಇಬ್ಬರು ವ್ಯಕ್ತಿಗಳ ಸಂಭಾಷಣೆ ಅವರ ಕಿವಿಗೆ ಬಿತ್ತು. ಒಬ್ಬರು ಇನ್ನೊಬ್ಬರಿಗೆ ಕೇಳುತ್ತಿದ್ದರು, 'ಏನ್ಸಾರ್? ನೀವು ಯಾವ ಕಡೆಯವರು?' ಎಂದ ಒಬ್ಬ. ಇನ್ನೊಬ್ಬ, 'ನಾನೇ? ನಾನು ಗಂಡಿನ ಕಡೆಯವನು... ನೀವು?' ಎಂದ. ಆ ಮತ್ತೊಬ್ಬ ಸ್ವಲ್ಪವೂ ಯೋಚಿಸದೆ, 'ಮಧುಮಗಳು ನನ್ನ ಸೋದರಮಾವನ ಬೀಗರ ಕಡೆಯವಳು' ಎಂದ. ಇದನ್ನ ಆಲಿಸಿದ ಮೇಲ್ವಿಚಾರಕ, 'ಸ್ವಾಮೀ, ಇದು ನಾಮಕರಣ ಸಮಾರಂಭ' ಎಂದ.

**ಜಯಮಾಲಾ ಪೈ**





ಕಲೆ: ಗಣೇಶ ಆಚಾರ್ಯ

## ಚೆಕ್ ಲೀಫ್

ಅಜ್ಜಿಯೊಂದಿಗೆ ಬ್ಯಾಂಕಿಗೆ ಬಂದ ಮೊಮ್ಮಗ ಆಕೆಗೆ, 'ನೀನಿಲ್ಲಿಯೇ ಕೂತಿರು, ನಾನು ಹೋಗಿ ಚೆಕ್ ಲೀಫ್ ತರ್ತೀನಿ' ಎಂದು ಹೇಳಿ ಹೋಗಿ ಒಂದು ಚೆಕ್ ತಂದು ಅಜ್ಜಿಯ ಸಹಿ ಪಡೆದು ಹಣ ತರಲು ಹೋದ. ಬಹಳ ಉದ್ದದ ಸರತಿಯಲ್ಲಿ ನಿಂತು ಹಣ ಪಡೆದು ಬಂದಾಗ ಅಜ್ಜಿ ಸೋಫಾದ ಮೇಲೆ ಕುಳಿತು ನಿದ್ದೆಗೆ ಜಾರಿದ್ದಳು. ಅವಳನ್ನು ಎಚ್ಚರಗೊಳಿಸಿ, 'ಆಯ್ತು, ,ಮನೆಗೆ ಹೋಗೋಣ ನಡಿ' ಎಂದಾಗ ಅಜ್ಜಿ ಕೋಪಗೊಂಡು, 'ಚಕ್ಕಲಿ ತರ್ತೀನಿ ಅಂದ್ಯಲ್ಲೊ? ಎಲ್ಲಿ ಚಕ್ಕಲಿ? ಬರೀ ಕೈಯಲ್ಲಿ ಬಂದಿದ್ದೀಯ?' ಎಂದು ಕೂಗಾಡಿದಳು. ಮೊಮ್ಮಗ ಕಂಗಾಲಾದ.

**ವಿ.ನಾಗೇಂದ್ರ**